ಅವರು ಹೆಂಗಸರು... ತಡ ಮಾಡುತ್ತಾರೆ. ನೀವೇ ಆತುರಪಡಿಸಬೇಕು. ಹೋಗಲು ಒಂದು ಗಂಟೆ, ಬರಲು ಒಂದು ಗಂಟೆ. ಅಲ್ಲಿ ಎರಡು ಗಂಟೆ ಹೊತ್ತು ಅಷ್ಟೆ. ಹತ್ತಕ್ಕೆ ನೀವು ಇಲ್ಲಿ ಇಲ್ಲದಿದ್ದರೆ... ನಿನ್ನ ಚರ್ಮ ಸುಲಿದುಬಿಡ್ತೀನಿ...' ಬೆದರಿಸಿದ.

ಬಾಲಯ್ಯನಿಗೆ ದೊಡ್ಡಸ್ತಿಕೆ ಕೊಟ್ಟಂತಾಯಿತು. 'ಆಗಲಿ ದೊರೆ ಅರ್ಧ ಗಂಟೆ ಮೊದಲೇ ಇರುತ್ತೇವೆ ನೋಡಿ' ಎನ್ನುತ್ತ ಹತ್ತಿ ಬೊಂದಯನ ಪಕ್ಕದಲ್ಲಿ ಕುಳಿತ. ನಿಂತಿದೆಯೆಂದುಕೊಂಡ ತುಂತುರು ಹನಿ ಮತ್ತೆ ಶುರುವಾಯಿತು. ಕಾರು ಮುಂದಕ್ಕೆ ಚಲಿಸಿತು. ಚಲಿಸುತ್ತಿದ್ದಂತೆ ಮಳೆ ಹೆಚ್ಚಾಯಿತೇ ಹೊರತು ಕಡಿಮೆಯಾಗಲಿಲ್ಲ. ವೆಂಕಟಾಪುರ ದಾಟಿ ಪದಿರ ಸೇರುವ ವೇಳೆಗೆ ಮತ್ತೆ ಜೋರಾಯಿತು. ಪದಿರದಲ್ಲಿ ಮಳೆ ನೋಡಿ ಬೊಂದಯನಿಗೆ ಎದೆ ಬಡಿದುಕೊಳ್ಳಲಾರಂಭಿಸಿತು. ಅದಾಗಲೆ ಕತ್ತಲು ಆವರಿಸಿತ್ತು.

'ದೊರೆಸಾನಿ... ನಾವು ಅಲ್ಲಿ ಹೋಗುವುದು ಕಷ್ಟವೇ. ಮಧ್ಯದಾರಿಯಿಂದಲೇ ವಾಪಸು ಬರಬೇಕಾಗುತ್ತದೆ. ನದಿ ನೋಡಿ ಎಷ್ಟು ಜೋರಾಗಿ ಹರಿಯುತ್ತಿದೆ. ಅಕ್ಕ ಪೆಲ್ಲಿ ಹೊಳೆ ನಮ್ಮನ್ನು ದಾಟಗೊಡುವುದಿಲ್ಲ ನೋಡಿ...' ಎಂದ.

ಕೂಡಲೇ ಬಾಲಯ್ಯ, 'ಏಯ್ ಹುಚ್ಚಾ... ದಾರಿ ತಿಳಿಯದೆ ದೊರೆ ಕಳುಹಿಸಿದ್ದಾರಾ... ಅಕ್ಕಪೆಲ್ಲಿ ಹೊಳೆ ದಾಟಲಾಗದಿದ್ದರೆ ಗೊಲ್ಲಪೆಲ್ಲಿ ಕಡೆಯಿಂದ ಹೋಗೋಣ...' ಎಂದ.

ಈ ಮಾತುಗಳನ್ನು ಕೇಳಿದ ದೊಡ್ಡ ದೊರೆಸಾನಿ, ಗದರುತ್ತಾ, 'ಏಯ್... ಅಕ್ಕಪೆಲ್ಲಿ ಗೊಲ್ಲಪೆಲ್ಲಿ ಎಂದು ಇಲ್ಲಿಯೇ ಸುತ್ತುತ್ತಾ ಇರುತ್ತೀಯಾ... ಸಲೀಸಾಗಿ ರಾಜನ್ನಪೇಟೆ ಮೇಲೆ ಹೋಗಲಿ ಗಾಡಿ. ನದಿ, ಕುಂಟೆ ಯಾವುದೂ ಇಲ್ಲ. ಎಲ್ಲಮ್ಮನ ದೇವಸ್ಥಾನದ ಹತ್ತಿರಕ್ಕೆ ಹೋಗುತ್ತೇವೆ' ಹೇಳಿದಳು.

'ಹೂಂ... ಹೌದೌದು... ನಾನೂ ಹಾಗೇ ಅಂದುಕೊಳ್ಳುತ್ತಿದ್ದೇನೆ ದೊರೆಸಾನಿ...' ಎಂದ ಬೊಂದಯ.

'ಊಂ... ನಿನ್ನ ತಲೆ... ಹಾಗಂದುಕೊಂಡವನು ಹೀಗೇಕೆ ಹೇಳಿದೆ. ದೊರೆಸಾನಿ ಹೇಳದಿದ್ದರೆ ಎಡವಟ್ಟು ಮಾಡುತ್ತಿದ್ದೆ...' ಅಣಕಿಸಿದ ಬಾಲಯ್ಯ.

'ಏಯ್... ನಾನೆಷ್ಟು ಬಾರಿ ಹೋಗಿಲ್ಲ... ಚಿಕ್ಕ ದೊರೆಸಾನಿಯನ್ನು ಕರೆದುಕೊಂಡು... ಬೇಕಾದರೆ ಕೇಳು' ಎಂದ ಬೊಂದಯ.

ಮತ್ತೆ ಅಣಕಿಸುವಂತೆ ನಗುತ್ತ, 'ಏಯ್... ನೀನು ಚಿಕ್ಕ ದೊರೆಸಾನಿಯ ಮದುವೆ ಸಮಯದಲ್ಲಿ ಬಂದೆ... ನಾನು ಅವರು ಹುಟ್ಟುವ ಮೊದಲಿನಿಂದ ಬರುತ್ತಿದ್ದೇನೆ ಗೊತ್ತೇನೋ... ಈ ಮಾರ್ಗದಲ್ಲಿ ಒಂಟಿ ಎತ್ತಿನ ಗಾಡಿ ಓಡಿಸಿದ್ದು ನಾನೇ... ದೊರೆ ಯಾರನ್ನೂ ನಂಬುತ್ತಿರಲಿಲ್ಲ. ಬಾಲುಗಾನೇ ಹೋಗಬೇಕೆಂದು ನನ್ನನ್ನೇ ಕಳುಹಿಸುತ್ತಿದ್ದರು. ಆಗ ನಿಂಗಂ ಹಳ್ಳಿಯಲ್ಲಿಯೇ ಇದ್ದೆವು... ಅಲ್ಲವಾ ದೊರೆಸಾನಿ...' ಎಂದು ಹಿಂದೆ ತಿರುಗಿ ನೋಡಿದ.

ಮೊದಲೇ ದೊಡ್ಡ ದೊರೆಸಾನಿ ಕೋಪದಿಂದಿದ್ದಾಳೆ. ಸೋದರಿಕೆಯೆಂದು ಪಟ್ಟು ಹಿಡಿದು ತಮ್ಮನ ಮಗಳನ್ನು ಮನೆ ತುಂಬಿಸಿಕೊಂಡಿದ್ದಳು. ಮಾಡಿಕೊಂಡ ನಂತರ ನಾದಿನಿಯಾಡಿದ ಮಾತಿನಿಂದ ಹೋಗಿಬರುವುದು ನಿಂತುಹೋಯಿತು. ಒಣಕೊಬ್ಬರಿ ಬಟ್ಟಲಿನ ತುಂಬ ಸಕ್ಕರೆ ಹುಯ್ದು ಅಣ್ಣತಮ್ಮಂದಿರಿಗೆ ಹಂಚಬೇಕೆಂದು ಎಲ್ಲೆಡೆ ಪುಕಾರು ಹಬ್ಬಿತು. ಎಲ್ಲೋ ದೂರದ ಪಟ್ಟಣಕ್ಕೆ ಯಾರು ಹೋಗುತ್ತಾರೆ ಬಿಡು ಎಂದುಕೊಂಡಳು. ಆದರೆ ಯಾವುದೋ ಕೆಲಸದ ಮೇಲೆ ತಮ್ಮನೇ ಪಟ್ಟಣದಿಂದ ಊರಿಗೆ ಬಂದಿದ್ದಾನೆ. ನಮ್ಮ ಬಾಂಧವ್ಯವೇನು ಕಡಿದುಹಾಕಿಕೊಳ್ಳುವಂತಹುದಲ್ಲ, ಒಂದು ಕೆಲಸ ಆಗುತ್ತದೆ ಬಿಡು ಎಂದುಕೊಂಡು ಮುಳ್ಳಿನ ಮೇಲೆ ಹೋದಂತೆ ಊರಿಗೆ ಹೋಗುತ್ತಿದ್ದಾಳೆ.

'ಏಯ್... ಏನ್ರೋ ಹುಚ್ಚಾಟ... ಹರಟೆ ಹೊಡೀತಾನೇ ಇರ್ತೀರಾ, ಗಾಡಿ ಓಡಿಸ್ತೀರಾ...' ಕೋಪದಿಂದ ಕೂಗಿದಳು ದೊರೆಸಾನಿ.